ಉಮ್ಮತ್ತೂರ್

ಬೆಂಗಳೂರು-ಟಿ ನರಸೀಪುರ, ಕುದೇರು, ವೇಗದೂತ ಸಾರಿಗೆಯು ಅನುಸೂಚಿ ಸಂಖ್ಯೆ ಘಟಕ 1 61ನ್ನು ದಿನಾಂಕ 13-9-2001 ರಿಂದ ಟಿ ನರಸೀಪುರ ಮತ್ತು ಕುದೇರು ನಡುವೆ ಸಾಕಷ್ಟು ಪ್ರಯಾಣಿಕರು ಇಲ್ಲದ ಕಾರಣ ಟಿ ನರಸೀಪುರದವರೆಗೆ ಕಾರ್ಯಚರಣೆ ಗೊಳಿಸಲಾಗುತ್ತಿದೆ ಈ ಮಾರ್ಗವು ರಾಷ್ಟ್ರೀಕೃತದಲ್ಲದ ವಲಯದಲ್ಲಿದ್ದು ಖಾಸಗಿ ಪ್ರವರ್ತಕರುಗಳ ಬಸ್ಸುಗಳು ಕಾರ್ಯಚರಣೆಯಲ್ಲಿರುತ್ತದೆ

ಖಾಸಗಿ ಸಾರಿಗೆ ಸಂಸ್ಥೆಯೊಂದರ ಎರಡು ಬಸ್ಸುಗಳಿಗೆ ಒಂದೇ ನೋಂದಣಿ ಸಂಖ್ಯೆಯನ್ನು ನಮೂದಿಸಿರುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 48(206)

ಸದಸ್ಯರ ಹೆಸರು ಶ್ರೀ ಸುರೇಶ್‌ಕುಮಾರ್ ಎಸ್ (ರಾಜಾಜಿನಗರ)

ಉತ್ತರಿಸುವ ಸಚಿವರು ಶ್ರೀ ಸಿ ಆರ್ ಸಗೀರ್ ಅಹಮದ್(ಸಾರಿಗೆ ಸಚಿವರು)

ಪ್ರಶ್ನೆ

ಅ ಬೆಂಗಳೂರಿನ ಖಾಸಗಿ ಸಾರಿಗೆ ಸಂಸ್ಥೆಯೊಂದು ತನ್ನ ಎರಡು ಬಸ್ಸುಗಳಿಗೆ ಒಂದೇ ನೋಂದಣಿ ಸಂಖ್ಯೆಯನ್ನು ನಮೂದಿಸಿಕೊಂಡು ಸಂಚರಿಸುತ್ತಿದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ ಬಂದಿದ್ದಲ್ಲಿ, ಈ ಸಂಸ್ಥೆಯ ವಿರುದ್ಧ ಕ್ರಮ ಜರುಗಿಸಲಾಗಿದೆಯೇ?

ಇ ರಾಜ್ಯದಲ್ಲಿ ಎಷ್ಟು ಈ ರೀತಿಯ ವಂಚನೆ ಪ್ರಕರಣಗಳು ದಾಖಲಾಗಿವೆ?

ಈ ಅಂತಹ ವಾಹನಗಳ ಒಡೆತನ ಹೊಂದಿದ ಸಂಸ್ಥೆಗಳಾವುವು? ಅವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ?

ಉತ್ತರ

ಅ ಬಂದಿದೆ

ಆ ಆರಕ್ಷಕ ಠಾಣೆಗಳಲ್ಲಿ ಮೊಖದ್ದಮೆಯು ದಾಖಲಾಗಿದ್ದು ತನಿಖೆಯು ಪ್ರಗತಿಯಲ್ಲಿದೆ

ಇ ಮೂರು ಪ್ರಕರಣಗಳು ದಾಖಿಲಾಗಿದೆ

ಈ 1 ನ್ಯಾಷನಲ್ ಟ್ರಾವಲ್ಸ್, ಬೆಂಗಳೂರು

2 ಮಾಸ್ಟರ್ ಟ್ರಾವಲ್ಸ್, ಬೆಂಗಳೂರು

3 ಶ್ರೀ ನಾರಾಯಣಪ್ಪ ಬೆಂಗಳೂರು

ನದರಿಯವರ ವಿರುದ್ಧ ಆರಕ್ಷಕ ರಾಣೆಗಳಲ್ಲಿ ಪ್ರಕರಣಗಳನ್ನು ದಾಖಿಲಿಸಿ ಕಾನೂನು ಕ್ರಮ ಜರುಗಿನಲಾಗುತ್ತಿದೆ

ಸಾರಿಗೆ ನಿಗಮಗಳ ಟೈನಿಗಳ ನೇಮಕಾತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 49(207)

ನದಸ್ಯರ ಹೆಸರು ಶ್ರೀ ಪೂಜಾರ್ ಪಿ ಹೆಚ್ (ಬಾಗಲಕೋಟೆ)

ಉತ್ತರಿಸುವ ಸಚಿವರು ಶ್ರೀ ಸಿ ಆರ್ ಸಗೀರ್ ಅಹಮದ್(ಸಾರಿಗೆ ಸಚಿವರು)

ಪ್ರಶ್ನೆ

ಅ ರಾಜ್ಯದ ಸಾರಿಗೆ ಸಂಸ್ಥೆಗಳಲ್ಲಿ ಹಾಲಿ ಕೆಲಸ ನಿರ್ವಹಿಸುತ್ತಿರುವ ತರಬೇತಿದಾರರ ಸಂಖ್ಯೆ ಎಷ್ಟು? ವಲಯವಾರು (ವಿಭಾಗ) ಹುದ್ದೆಗಳವಾರು ವಿವರ ನೀಡುವುದು?

ಆ ಎಷ್ಟು ವರ್ಷಗಳಿಂದ ಈ ರೀತಿಯ ತರಬೇತಿದಾರರ ನೇಮಕ ವದ್ದತಿ ಜಾರಿಯಲ್ಲಿದೆ?

ಇ ಇವರುಗಳ ತರಬೇತಿ ಅವಧಿ ಮುಗಿದ ಬಳಿಕ ಖಾಯಂಗೊಳಿಸಲಾಗಿದೆಯೇ?

ಈ. ಇನ್ನೂ ಖಾಯಂ ಆಗಬೇಕಾಗಿರುವ ತರಬೇತಿದಾರರ ಸಂಖ್ಯೆ ಎಷ್ಟು? ಅವರು ಎಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ?

ಉತ್ತರ

ಅ ರಾಜ್ಯದ ಸಾರಿಗೆ ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ತರಬೇತಿದಾರರ ಸಂಖ್ಯೆಯನ್ನು ಈ ಕೆಳಗೆ ನೀಡಲಾಗಿದೆ